Editor & Publisher: Santosh Kumar
PRGI Registration No.: KNBIL/26/A5237

# ಸ್ವರ್ಣ ಭಾರತ್ ಟೈಮ್ಸ್

ವಾರಪತ್ರಿಕೆ
SWARNA BHARAT TIMES
Voice of the People | Vision of the Nation

Executive Editor:
VISHWAKEERTHI A.V

ಸಂಪುಟ/Volume– 01 | ಸಂಚಿಕೆ /Issue– 02 | 23 ಜುಲೈ/ July 2026 | ಪುಟಗಳು/Page-4 | ಬೆಲೆ/Rate. 5/-

swarnabharattimes@gmail.com | +91 98457 32329 | Follow us on: Facebook • Instagram @SwarnaBharatTimes | www.swarnabharattimes.com

## ರೈತರ ಆದಾಯ ಹೆಚ್ಚಳಕ್ಕೆ ಕೇಂದ್ರದ ಹೊಸ ಯೋಜನೆಗಳು... ಕೃಷಿ ಕ್ಷೇತ್ರಕ್ಕೆ ಹೊಸ ಪ್ರೋತ್ಸಾಹಕ ಕ್ರಮಗಳ ಕುರಿತು ಚರ್ಚೆ



ನವದೆಹಲಿ, ಜುಲೈ 18: ದೇಶದ ಕೃಷಿ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸಿ ರೈತರ ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದ ಮಟ್ಟದಲ್ಲಿ ವಿವಿಧ ಹೊಸ ಪ್ರೋತ್ಸಾಹಕ ಯೋಜನೆಗಳ ಕುರಿತು ಚರ್ಚೆಗಳು ನಡೆಯುತ್ತಿವೆ. ಕೃಷಿ ಉತ್ಪಾದನೆ ಹೆಚ್ಚಳ, ಆಧುನಿಕ ತಂತ್ರಜ್ಞಾನ ಬಳಕೆ, ನೀರಿನ ಸಮರ್ಪಕ ನಿರ್ವಹಣೆ, ಮೌಲ್ಯ ವರ್ಧನೆ ಹಾಗೂ ಮಾರುಕಟ್ಟೆ ಸೌಲಭ್ಯಗಳ ವಿಸ್ತರಣೆಗೆ ಹೆಚ್ಚಿನ ಆದ್ಯತೆ ನೀಡುವ ಬಗ್ಗೆ ಅಧಿಕಾರಿಗಳು ಮತ್ತು ತಜ್ಞರೊಂದಿಗೆ ಸಮಾಲೋಚನೆಗಳು ಮುಂದುವರಿದಿವೆ.

ಕೃಷಿ ಕ್ಷೇತ್ರದಲ್ಲಿ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಿ, ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸುವ ಕ್ರಮಗಳ ಬಗ್ಗೆ ಸರ್ಕಾರ ಗಮನ ಹರಿಸಿದೆ. ಗುಣಮಟ್ಟದ ಬೀಜ, ರಸಗೊಬ್ಬರ, ಕೃಷಿ ಯಂತ್ರೋಪಕರಣಗಳು, ಸೂಕ್ಷ್ಮ ನೀರಾವರಿ ವ್ಯವಸ್ಥೆ ಹಾಗೂ ಡಿಜಿಟಲ್ ಕೃಷಿ ತಂತ್ರಜ್ಞಾನಗಳನ್ನು ಹೆಚ್ಚು ರೈತರಿಗೆ ತಲುಪಿಸುವ ಕುರಿತು ಚರ್ಚೆಗಳು ನಡೆದಿವೆ.

ರೈತರ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ದೊರಕುವಂತೆ ಕೃಷಿ ಮೂಲಸೌಕರ್ಯವನ್ನು ಬಲಪಡಿಸುವುದು, ಸಂಗ್ರಹಣಾ ಕೇಂದ್ರಗಳು, ಶೀತಗೃಹಗಳು ಹಾಗೂ ಸಂಸ್ಕರಣಾ ಘಟಕಗಳ ಅಭಿವೃದ್ಧಿಗೆ ಉತ್ತೇಜನ ನೀಡುವ ಸಾಧ್ಯತೆಗಳನ್ನೂ ಪರಿಶೀಲಿಸಲಾಗುತ್ತಿದೆ. ರೈತ ಉತ್ಪಾದಕ ಸಂಘಗಳು (ಈಕಫೌ) ಮತ್ತು ಸಹಕಾರ ಸಂಘಗಳ ಮೂಲಕ ರೈತರ ಆದಾಯವನ್ನು ಹೆಚ್ಚಿಸುವ ಮಾರ್ಗಗಳ ಕುರಿತು ಸಹ ಚರ್ಚೆ ನಡೆಯುತ್ತಿದೆ.

ಹವಾಮಾನ ವೈಪರೀತ್ಯದಿಂದ ಉಂಟಾಗುವ ನಷ್ಟವನ್ನು ತಗ್ಗಿಸಲು ಬೆಳೆ ವಿಮೆ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ, ಹವಾಮಾನ ಮುನ್ಸೂಚನೆ ಸೇವೆಗಳ ವಿಸ್ತರಣೆ ಹಾಗೂ ನೀರಿನ ಸಮರ್ಪಕ ಬಳಕೆಗೆ ಒತ್ತು ನೀಡುವ ಸಾಧ್ಯತೆಗಳಿವೆ. ನೈಸರ್ಗಿಕ ಕೃಷಿ, ಸಾವಯವ ಕೃಷಿ ಹಾಗೂ ಸುಸ್ಥಿರ ಕೃಷಿ ಪದ್ಧತಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಪ್ರಸ್ತಾವಗಳೂ ಪರಿಶೀಲನೆಯಲ್ಲಿವೆ.

ಕೃಷಿ ತಜ್ಞರ ಅಭಿಪ್ರಾಯದಂತೆ, ರೈತರಿಗೆ ಸಮಯಕ್ಕೆ ಸರಿಯಾಗಿ ಸಾಲ, ತಾಂತ್ರಿಕ ಮಾರ್ಗದರ್ಶನ, ಮಾರುಕಟ್ಟೆ ಮಾಹಿತಿ ಹಾಗೂ ಬೆಳೆ ಮೌಲ್ಯವರ್ಧನೆಗೆ ಅಗತ್ಯವಾದ ನೆರವು ದೊರೆತರೆ ಕೃಷಿ ಕ್ಷೇತ್ರ ಮತ್ತಷ್ಟು ಅಭಿವೃದ್ಧಿಂಮಾಗಲಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ವಿವಿಧ ಸಚಿವಾಲಯಗಳು ಹಾಗೂ ಕೃಷಿ ತಜ್ಞರೊಂದಿಗೆ ಸಮಾಲೋಚನೆ ನಡೆಸುತ್ತಿದೆ.

ಆದಾಗ್ಯೂ, ಈ ಹಂತದಲ್ಲಿ ಯಾವುದೇ ಹೊಸ ಯೋಜನೆಗೆ ಅಧಿಕೃತ ಘೋಷಣೆ ಹೊರಬಿದ್ದಿಲ್ಲ. ಚರ್ಚೆಗಳು ಪೂರ್ಣಗೊಂಡ ಬಳಿಕ ಕೇಂದ್ರ ಸರ್ಕಾರ ಅಧಿಕೃತವಾಗಿ ಹೊಸ ಯೋಜನೆಗಳು ಅಥವಾ ಈಗಿರುವ ಯೋಜನೆಗಳ ವಿಸ್ತರಣೆಯ ಕುರಿತು ಪ್ರಕಟಣೆ ನೀಡುವ ಸಾಧ್ಯತೆ ಇದೆ.

### ಮುಖ್ಯಾಂಶಗಳು

- ಕೃಷಿ ಉತ್ಪಾದನೆ ಹೆಚ್ಚಳಕ್ಕೆ ಹೊಸ ಪ್ರೋತ್ಸಾಹಕ ಕ್ರಮಗಳ ಕುರಿತು ಚರ್ಚೆ.
- ರೈತರ ಆದಾಯ ವೃದ್ಧಿಗೆ ಸಮಗ್ರ ಯೋಜನೆಗಳ ರೂಪುರೇಷೆ ಸಿದ್ಧಪಡಿಸುವ ಪ್ರಯತ್ನ.
- ಆಧುನಿಕ ಕೃಷಿ ತಂತ್ರಜ್ಞಾನ, ನೀರಾವರಿ ಹಾಗೂ ಮೌಲ್ಯವರ್ಧನೆಗೆ ಒತ್ತು.
- FPOಗಳು ಮತ್ತು ಕೃಷಿ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಗಮನ.
- ಇಲ್ಲಿಯವರೆಗೆ ಯಾವುದೇ ಅಧಿಕೃತ ಯೋಜನೆ ಘೋಷಣೆಯಾಗಿಲ್ಲ; ಚರ್ಚೆಗಳು ಮಾತ್ರ ನಡೆಯುತ್ತಿವೆ.

ಸ್ವರ್ಣ ಭಾರತ್ ಟೈಮ್ಸ್ । ರಾಜ್ಯ ಸುದ್ದಿ

## ಡಿಸೆಂಬರ್ ಅಂತ್ಯದೊಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಚುನಾವಣೆ; 2027ರ ಮಾರ್ಚ್ ಅಂತ್ಯದೊಳಗೆ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆ ಪೂರ್ಣ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಬೆಂಗಳೂರು, ಜುಲೈ 18: ರಾಜ್ಯದಲ್ಲಿ ಬಹು ನಿರೀಕ್ಷಿತ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸರ್ಕಾರ ಸಿದ್ಧತೆ ನಡೆಸಿದ್ದು, ಗ್ರೇಟರ್ ಬೆಂಗಳೂರು ಪ್ರಾಧಿಕಾರ (Greater Bengaluru Authority - GBA) ಚುನಾವಣೆಯನ್ನು 2026ರ ಡಿಸೆಂಬರ್ ಅಂತ್ಯ ದೊಳಗೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಉಳಿದ ಎಲ್ಲಾ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು 2027ರ ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು.




ಶುಕ್ರವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (Special Intensive Revision - SIR) ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಚುನಾವಣೆ ನಡೆಸಲು ಹೆಚ್ಚಿನ ಸಮಯ ನೀಡುವಂತೆ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿತ್ತು. ಸರ್ಕಾರದ ಮನವಿಯನ್ನು ಪರಿಗಣಿಸಿದ ಸುಪ್ರೀಂ ಕೋರ್ಟ್ ಡಿಸೆಂಬರ್ 31ರವರೆಗೆ ಅವಧಿ ವಿಸ್ತರಣೆ ನೀಡಿದೆ ಎಂದು ಮಾಹಿತಿ ನೀಡಿದರು.


### ಸ್ಥಳೀಯ ಸಂಸ್ಥೆಗಳ ಚುನಾವಣೆ ವೇಳಾಪಟ್ಟಿ

ಮುಖ್ಯಮಂತ್ರಿಯವರ ಪ್ರಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯ ನಂತರ ರಾಜ್ಯದ ವಿವಿಧ ಹಂತಗಳ ಸ್ಥಳೀಯ ಸಂಸ್ಥೆಗಳಾದ:

ಜಿಲ್ಲಾ ಪಂಚಾಯತ್

ಮುಂದಿನ ಪುಟಕ್ಕೆ

## ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಧರ್ಮಪತ್ನಿ ಚೆನ್ನಮ್ಮ ನಿಧನ



### ಧೀಮಂತ ನಾಯಕನ ಬದುಕಿನ ಶಕ್ತಿಯಾಗಿದ್ದ ಚೆನ್ನಮ್ಮ ಇನ್ನು ನೆನಪು

ಬೆಂಗಳೂರು, ಜು. 19: ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಧರ್ಮಪತ್ನಿ ಶ್ರೀಮತಿ ಚೆನ್ನಮ್ಮ ದೇವೇಗೌಡ (85) ಅವರು ತೀವ್ರ ಅನಾರೋಗ್ಯದ ಹಿನ್ನೆಲೆಯಲ್ಲಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ನಿಧನರಾದರು. ಅವರ ಅಗಲಿಕೆಯಿಂದ ರಾಜಕೀಯ, ಸಾಮಾಜಿಕ ಹಾಗೂ ಸಾರ್ವಜನಿಕ ವಲಯದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ.

ಕಳೆದ ಕೆಲವು ದಿನಗಳಿಂದ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಚೆನ್ನಮ್ಮ ಅವರನ್ನು ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯ ಹಿರಿಯ ವೈದ್ಯರಾದ ಡಾ. ಸತ್ಯನಾರಾಯಣ ಮೈಸೂರು ಹಾಗೂ ಡಾ. ಸುನೀಲ್ ಕಾರಂತ್ ನೇತೃತ್ವದ ವೈದ್ಯರ ತಂಡ ಚಿಕಿತ್ಸೆ ನೀಡುತ್ತಿತ್ತು. ಆದರೆ ಎಲ್ಲಾ ಪ್ರಯತ್ನಗಳ ನಡುವೆಯೂ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಚೆನ್ನಮ್ಮ ಅವರ ನಿಧನದ ವೇಳೆ ಆಸ್ಪತ್ರೆಯಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಎಚ್.ಡಿ. ರೇವಣ್ಣ ಸೇರಿದಂತೆ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

### ರಾಷ್ಟ್ರದ ಗಣ್ಯರಿಂದ ಸಂತಾಪ

ಚೆನ್ನಮ್ಮ ದೇವೇಗೌಡ ಅವರ ನಿಧನಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಪ್ರಧಾನಮಂತ್ರಿ ನರೇಂದ್ರ ಮೋದಿ, ಕರ

# ಮಹಿಳೆಯರಿಗಾಗಿ ಉಚಿತ ಆಟೋ ಚಾಲನಾ ತರಬೇತಿ ಯೋಜನೆಗೆ ಚಾಲನೆ





ಬೆಂಗಳೂರು: ಮಹಿಳಾ ಸಬಲೀಕರಣಕ್ಕೆ ಮತ್ತೊಂದು ಮಹತ್ವದ ಹೆಜ್ಜೆಯಾಗಿ, ನಮ್ಮ ಸಾರಥಿ (Namma Sarathi ) ವತಿಯಿಂದ ಬಡ ಮತ್ತು ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗಾಗಿ ಉಚಿತ ಆಟೋ ಚಾಲನಾ ತರಬೇತಿ ಕಾರ್ಯಕ್ರಮಕ್ಕೆ ಬೆಂಗಳೂರಿನಲ್ಲಿ ಅಧಿಕೃತವಾಗಿ ಚಾಲನೆ ನೀಡಲಾಯಿತು.

ಈ ಯೋಜನೆಯ ಉದ್ದೇಶ ಮಹಿಳೆಯರಿಗೆ ಸ್ವಾವಲಂಬಿ ಜೀವನ ಕಟ್ಟಿಕೊಳ್ಳಲು ನೆರವಾಗುವುದು, ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಹಾಗೂ ಆತ್ಮವಿಶ್ವಾಸದಿಂದ ಸಮಾಜದಲ್ಲಿ ಮುನ್ನಡೆಯಲು ಪ್ರೋತ್ಸಾಹಿಸುವುದಾಗಿದೆ. ತರಬೇತಿ ಪೂರ್ಣಗೊಳಿಸಿದ ಮಹಿಳೆಯರು ಸ್ವತಂತ್ರವಾಗಿ ಆಟೋ ಚಾಲಕರಾಗಿ ಜೀವನೋಪಾಯವನ್ನು ನಡೆಸುವ ಅವಕಾಶವನ್ನು ಪಡೆಯಲಿದ್ದಾರೆ.

ಕಾರ್ಯಕ್ರಮಕ್ಕೆ ನಮ್ಮ ಸಾರಥಿ ಅಧ್ಯಕ್ಷರಾದ ಡಾ. ಸಂಪತ್ ಹಾಗೂ ಅಂಬೇಡ್ಕರ್ ಸೇವಾ ಸಮಿತಿಯ ಶ್ರೀ ಸ್ವಾಮಿ ವೇಲು ಜಂಟಿಯಾಗಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಇಂತಹ ಉಚಿತ ಕೌಶಲ್ಯಾಭಿವೃದ್ಧಿ ಯೋಜನೆಗಳು ಅತ್ಯಂತ ಅಗತ್ಯವಾಗಿದ್ದು, ಮಹಿಳೆಯರಿಗೆ ಶಾಶ್ವತ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಮೂಲಕ ಸಮಾಜದ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಲಿವೆ ಎಂದು ಅಭಿಪ್ರಾಯಪಟ್ಟರು.

ಈ ಕಾರ್ಯಕ್ರಮದಲ್ಲಿ :ಕಂಅ ಸಿವಿಕ್ ಲೀಡರ್ ಶ್ರೀ ಅನಿಲ್ ಹಾಗೂ ಸ್ವರ್ಣ ಭಾರತ್ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷರು ಹಾಗೂ BPAC ಸಿವಿಕ್ ಲೀಡರ್ ಡಾ. ರಜನಿ ಸಂತೋಷ್ ಉಪಸ್ಥಿತರಿದ್ದು, ಮಹಿಳಾ ಸಬಲೀಕರಣಕ್ಕಾಗಿ ಇಂತಹ ಸಾಮಾಜಿಕ ಕಾರ್ಯಕ್ರಮಗಳಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು. ಸಮಾಜದ ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ಉದ್ಯೋಗಾಧಾರಿತ ತರಬೇತಿ ನೀಡುವ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿ ರೂಪಿಸುವುದು ಇಂತಹ ಕಾರ್ಯಕ್ರಮಗಳ ಪ್ರಮುಖ ಉದ್ದೇಶವಾಗಿದೆ ಎಂದು ಅವರು ತಿಳಿಸಿದರು.

ಈ ಯೋಜನೆಯ ಮೂಲಕ ಅನೇಕ ಮಹಿಳೆಯರು ಆತ್ಮನಿರ್ಭರರಾಗುವ ಜೊತೆಗೆ ತಮ್ಮ ಕುಟುಂಬದ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ವಿಶ್ವಾಸವನ್ನು ಆಯೋಜಕರು ವ್ಯಕ್ತಪಡಿಸಿದ್ದಾರೆ. ಮಹಿಳಾ ಸಬಲೀಕರಣದತ್ತ ಇದು ಒಂದು ಶ್ಲಾಘನೀಯ ಹೆಜ್ಜೆಯಾಗಿದ್ದು, ಸಮಾಜದ ವಿವಿಧ ವಲಯಗಳಿಂದ ಪ್ರಶಂಸೆ ವ್ಯಕ್ತವಾಗಿದೆ.

# 2002ರ ವೋಟರ್ ಲಿಸ್ಟ್‌ನಲ್ಲಿ ಹೆಸರಿಲ್ಲದಿದ್ದರೆ ಆತಂಕ ಬೇಡ, ಇಲ್ಲಿದೆ ಚುನಾವಣಾ ಆಯೋಗದ ಪರ್ಯಾಯ ಮಾರ್ಗ!



ರಾಜ್ಯದಲ್ಲಿ ಪ್ರಸ್ತುತ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (SIR) ಪ್ರಕ್ರಿಯೆಯಲ್ಲಿ ಗಣತಿ ನಮೂನೆ ಭರ್ತಿ ಮಾಡಲು 2002ರ ಮತದಾರರ ಪಟ್ಟಿಯಲ್ಲಿ ತಮ್ಮ ಅಥವಾ ಪೋಷಕರ ಹೆಸರುಗಳು ಪತ್ತೆಯಾಗುತ್ತಿಲ್ಲ ಎಂದು ಹಲವು ನಾಗರಿಕರು ದೂರು ನೀಡಿದ್ದರು.

ಮತದಾರರ ಪಟ್ಟಿಯನ್ನು 'ಶುದ್ಧ' ಮತ್ತು 'ನಿಖರ'ವನ್ನಾಗಿ ಮಾಡುವ ಭರದಲ್ಲಿ, ನಕಲಿ ಅಥವಾ ಮೃತ ವ್ಯಕ್ತಿಗಳ ಹೆಸರನ್ನು ತೆಗೆದುಹಾಕುವಾಗ ತಪ್ಪುಗಳು ಸಂಭವಿಸಿ, ಅಸಲಿ ಮತದಾರರ ಹೆಸರುಗಳೂ ಪಟ್ಟಿಯಿಂದ ಮಾಯವಾಗುವ ಅಪಾಯವಿರುತ್ತದೆ. ಅಲ್ಲದೆ, ಈ ವ್ಯವಸ್ಥೆಯನ್ನು ಜಾರಿಗೆ ತರುವಾಗ ಇತ್ತೀಚಿನ ವರ್ಷಗಳಲ್ಲಿ ಕಂಡುಬಂದ ಅತಿದೊಡ್ಡ ಸಮಸ್ಯೆ ಎಂದರೆ 'ಡೇಟಾ ಕಳ್ಳತನ'.

ಉದಾಹರಣೆಗೆ, ಕರ್ನಾಟಕದಲ್ಲಿ ಮತದಾರರ ಮಾಹಿತಿ ಸಂಗ್ರಹಿಸುವ ನೆಪದಲ್ಲಿ ಖಾಸಗಿ ಸಂಸ್ಥೆಗಳು ಅಕ್ರಮವಾಗಿ ಡೇಟಾ ಸಂಗ್ರಹಿಸಿದ ಪ್ರಕರಣಗಳು ಈ ವ್ಯವಸ್ಥೆಯ ಬಗೆಗಿನ ನಂಬಿಕೆ ಯನ್ನು ಕುಂದಿಸಿವೆ. ಹಾಗಾಗಿ, ಆಯೋಗವು ಗ್ರಾಮೀಣ ಮಟ್ಟದಲ್ಲಿ ಜನರಿಗೆ ಇನ್ನಷ್ಟು ಜಾಗೃತಿ ಮೂಡಿಸಬೇಕು. ಅಧಿಕಾರಿಗಳು, ಸಿಬ್ಬಂದಿಯು ಸಮರ್ಥವಾಗಿ ಕಾರ್ಯನಿರ್ವಹಿಸಲು ಕ್ರಮ ತೆಗೆದುಕೊಳ್ಳಬೇಕು. ಆಗ ಮಾತ್ರ ಎಸ್‌ಐಆರ್ ಉದ್ದೇಶ ಜಾರಿಗೆ ಬರುತ್ತದೆ ಹಾಗೂ ಜನರು ವ್ಯವಸ್ಥೆ ಮೇಲೆ ವಿಶ್ವಾಸ ಇರಿಸಲು ಸಾಧ್ಯವಾಗುತ್ತದೆ.

ಸಾಮಾನ್ಯ ಜನರಿಗೆ ಈ ಪ್ರಕ್ರಿಯೆಯ ಬಗ್ಗೆ ಸರಿಯಾದ ಮಾಹಿತಿ ಇಲ್ಲದಿರುವುದು ಮತ್ತು ಬೂತ್ ಮಟ್ಟದ ಅಧಿಕಾರಿಗಳು (BLO) ಎಲ್ಲ ಮನೆಗಳಿಗೂ ತಲುಪುವಲ್ಲಿ ವಿಳಂಬವಾಗುತ್ತಿರು ವುದು ಸವಾಲಾಗಿ ಪರಿಣಮಿಸಿದೆ. ಲಕ್ಷಾಂತರ BLOಗಳನ್ನು ತರಬೇತಿಗೊಳಿಸುವುದು ಮತ್ತು ಕಡಿಮೆ ಅವಧಿಯಲ್ಲಿ ಕೋಟ್ಯಂತರ ಕುಟುಂಬಗಳನ್ನು ಖುದ್ದಾಗಿ ಭೇಟಿ ಮಾಡು ವುದು ಆಯೋಗಕ್ಕೆ ದೊಡ್ಡ ಸವಾಲಾಗಿದೆ. ಇತ್ತೀಚಿನ ವರದಿಗಳ ಪ್ರಕಾರ, ಅಗತ್ಯವಿರುವ ಸಿಬ್ಬಂದಿಗಳ ಸಂಖ್ಯೆಯ ಕೊರತೆಯೂ ಕಾಡುತ್ತಿದೆ. ದೇಶದ ವಿವಿಧ ಭಾಗಗಳಲ್ಲಿನ ಭೌಗೋಳಿಕ ಕಠಿಣತೆ ಹಾಗೂ ಮಳೆಗಾಲದಂತಹ ಹವಾಮಾನ ವೈಪರೀತ್ಯಗಳು BLOಗಳ ಮನೆ–ಮನೆ ಭೇಟಿಯ ಪ್ರಕ್ರಿಯೆಗೆ ಅಡ್ಡಿಯಾಗುತ್ತಿವೆ. ಈ ಹಿನ್ನೆಲೆಯಲ್ಲಿ ಮತದಾರರ ಆತಂಕ ನಿವಾರಿಸಲು ಚುನಾವಣಾ ಆಯೋಗವು (Election Commission) ಮಹತ್ವದ ಸ್ಪಷ್ಟನೆ ಹಾಗೂ ಪರ್ಯಾಯ ಮಾರ್ಗಗಳನ್ನು ಪ್ರಕಟಿಸಿದೆ. ನಿಮ್ಮ ಅಥವಾ ನಿಮ್ಮ ಕುಟುಂಬದವರ ಹೆಸರು 2002ರ ಪಟ್ಟಿಯಲ್ಲಿ ಇಲ್ಲದಿದ್ದರೆ ಗಾಬರಿಯಾಗಬೇಕಿಲ್ಲ. ಸಂತತಿ (Progeny) ಅಥವಾ ಸಂಬಂಧಿಕರ (Relative) ಹೆಸರನ್ನು ಮ್ಯಾಪ್ ಮಾಡುವ ಮೂಲಕ ಅಥವಾ ಕ್ಲೈಮ್ಸ್ ಅಂಡ್ ಆಬ್ಜೆಕ್ಷನ್ಸ್ ಅವಧಿಯಲ್ಲಿ ಹೊಸದಾಗಿ ಅರ್ಜಿ ಸಲ್ಲಿಸುವ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದು ಎಂದು ಕರ್ನಾಟಕದ ಜಂಟಿ ಮುಖ್ಯ ಚುನಾವಣಾಧಿಕಾರಿ ಎಸ್. ಯೋಗೇಶ್ವರ್ ತಿಳಿಸಿದ್ದಾರೆ.

ಸಂಬಂಧಿಕರ ಹೆಸರು ಮ್ಯಾಪ್ ಮಾಡುವುದು

ಒಂದು ವೇಳೆ 2025ರ ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರಿದ್ದು, 2002ರ ಪಟ್ಟಿಯಲ್ಲಿ ಸಿಗದಿದ್ದರೆ, 2002ರ ಲಿಸ್ಟ್‌ನಲ್ಲಿ ಹೆಸರಿರುವ ನಿಮ್ಮ ಯಾವುದೇ ಸಂಬಂಧಿಕರ ವಿವರಗಳನ್ನು ನೀವು ನೀಡಬಹುದು. 2002ರ ಮತದಾರರ ಪಟ್ಟಿಯನ್ನು https:// voters. eci.gov.in ಜಾಲತಾಣದ ಮೂಲಕ ಪರಿಶೀಲಿಸಬಹುದಾಗಿದೆ. ನಿಮ್ಮ ತಂದೆ–ತಾಯಿಯ ಹೆಸರು 2002ರ ಪಟ್ಟಿಯಲ್ಲಿ ಇಲ್ಲದಿದ್ದರೂ, ಅವರ ಸಹೋದರ ಅಥವಾ ಸಹೋದರಿಯರು (ಚಿಕ್ಕಪ್ಪ, ದೊಡ್ಡಪ್ಪ, ಅತ್ತೆ, ಮಾವ ಇತ್ಯಾದಿ) ಸೇರಿದಂತೆ ತಂದೆ ಅಥವಾ ತಾಯಿಯ ಕಡೆಯ ಯಾವುದೇ ರಕ್ತಸಂಬಂಧಿಗಳ ಹೆಸರನ್ನು ಮ್ಯಾಪ್ ಮಾಡಬಹುದು. ಈ ಸಂಬಂಧಿಕರು ಭಾರತದ ಯಾವುದೇ ಭಾಗದಲ್ಲಿ ವಾಸಿಸುತ್ತಿದ್ದರೂ ಕೇಂದ್ರಿಕೃತ ಪೋರ್ಟಲ್ ಮೂಲಕ ಬಿಎಲ್‌ಒ (BLO) ಅವರ ವಿವರಗಳನ್ನು ಸುಲಭವಾಗಿ ಪರಿಶೀಲಿಸ ಲಿದ್ದಾರೆ.

ದಾಖಲೆ ಸಲ್ಲಿಕೆ ಯಾವಾಗ?

ಈ ಸಂಬಂಧವನ್ನು ಸಾಬೀತುಪಡಿಸಲು ಆರಂಭಿಕ ಎಣಿಕೆ ನಮೂನೆಯೊಂದಿಗೆ ಯಾವುದೇ ಹೆಚ್ಚುವರಿ ದಾಖಲೆಗಳನ್ನು ಲಗತ್ತಿಸುವ ಅಗತ್ಯವಿರು ವುದಿಲ್ಲ. ಆದರೆ, ಕರಡು ಮತದಾರರ ಪಟ್ಟಿ ಪ್ರಕಟವಾದ ಬಳಿಕ ಪರಿಶೀಲನೆಗಾಗಿ ಒಂದು ವೇಳೆ ನೋಟಿಸ್ ಬಂದರೆ ಮಾತ್ರ, ಚುನಾವಣಾ ಆಯೋಗ ಅನುಮೋದಿಸಿರುವ 12 ಅಧಿಕೃತ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಸಲ್ಲಿಸಬೇಕಾಗುತ್ತದೆ.

ದಾಖಲೆ ಇಲ್ಲದಿದ್ದರೆ 'ಹೊಸ ಮತದಾರ'

ಒಂದು ವೇಳೆ 2002ರ ಪಟ್ಟಿಯಲ್ಲಿ ನಿಮ್ಮ ಯಾವುದೇ ಸಂಬಂಧಿಕರ ಹೆಸರೂ ಪತ್ತೆಯಾಗದಿದ್ದರೆ, ಅಂತಹ ವ್ಯಕ್ತಿಯನ್ನು 'ಹೊಸ ಮತದಾರ' ಎಂದು ಪರಿಗಣಿಸಲಾಗುತ್ತದೆ. ಇಂತಹ ನಾಗರಿಕರು ಆತಂಕಪಡುವ ಅಗತ್ಯವಿಲ್ಲ. ಮುಂಬರುವ ಆಗಸ್ಟ್ 5ರಿಂದ ಸೆಪ್ಟೆಂಬರ್ 4ರವರೆಗೆ ನಡೆಯುವ 'ಕ್ಲೈಮ್ಸ್ ಅಂಡ್ ಆಬ್ಜೆಕ್ಷನ್ಸ್' (ಹಕ್ಕುಗಳು ಮತ್ತು ಆಕ್ಷೇಪಣೆಗಳು) ಅವಧಿಯಲ್ಲಿ, ಫಾರ್ಮ್–6, ಕಡ್ಡಾಯ ಘೋಷಣಾ ಪತ್ರ ಹಾಗೂ ಆಯೋಗ ನಿಗದಿಪಡಿಸಿರುವ 12 ದಾಖಲೆಗಳಲ್ಲಿ ಒಂದನ್ನು ಸಲ್ಲಿಸಿ ಅಂತಿಮ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸುಲಭವಾಗಿ ಸೇರಿಸಿಕೊಳ್ಳಬಹುದು ಎಂದು ಚುನಾವಣಾ ಆಯೋಗ ಸ್ಪಷ್ಟಪಡಿಸಿದೆ.

*1ನೇ ಪುಟದಿಂದ*

ತಾಲ್ಲೂಕು ಪಂಚಾಯತ್

ಗ್ರಾಮ ಪಂಚಾಯತ್

ನಗರಸಭೆಗಳು

ಪುರಸಭೆಗಳು

ಮಹಾನಗರ ಪಾಲಿಕೆಗಳು

ಇವುಗಳ ಚುನಾವಣೆಗಳನ್ನು 2027ರ ಮಾರ್ಚ್ ಅಂತ್ಯದೊಳಗೆ ಹಂತ ಹಂತವಾಗಿ ಪೂರ್ಣಗೊಳಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ಯುವಕರಿಗೆ ಹೆಚ್ಚಿನ ಅವಕಾಶ

ಈ ಬಾರಿಯ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಯುವಕರು, ಮಹಿಳೆಯರು ಹಾಗೂ ಹೊಸ ಮುಖಗಳಿಗೆ ಹೆಚ್ಚಿನ ಅವಕಾಶ ನೀಡಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು. ಗ್ರಾಮ ಪಂಚಾಯತ್‌ನಿಂದ ಹಿಡಿದು ಮಹಾನಗರ ಪಾಲಿಕೆಗಳವರೆಗೆ ಹೊಸ ನಾಯಕತ್ವವನ್ನು ಬೆಳೆಸುವ ಉದ್ದೇಶ ಕಾಂಗ್ರೆಸ್ ಪಕ್ಷಕ್ಕಿದೆ ಎಂದು ಅವರು ಹೇಳಿದರು.

ರಾಜಕೀಯದಲ್ಲಿ ಯುವಜನರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಮೂಲಕ ಸ್ಥಳೀಯ ಆಡಳಿತಕ್ಕೆ ಹೊಸ ಚೈತನ್ಯ ನೀಡಲು ಪಕ್ಷ ಬದ್ಧವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ವಿಕೇಂದ್ರೀಕರಣಕ್ಕೆ ಸರ್ಕಾರದ ಬದ್ಧತೆ

ಭಾರತ ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿಗಳ ಆಶಯದಂತೆ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳನ್ನು ಮತ್ತಷ್ಟು ಬಲಪಡಿಸುವುದು ಸರ್ಕಾರದ ಪ್ರಮುಖ ಗುರಿಯಾಗಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಗ್ರಾಮ ಪಂಚಾಯತ್‌ಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಮಹಾನಗರ ಪಾಲಿಕೆಗಳಿಗೆ ಹೆಚ್ಚಿನ ಆಡಳಿತಾತ್ಮಕ ಹಾಗೂ ಆರ್ಥಿಕ ಅಧಿಕಾರ ನೀಡುವ ಮೂಲಕ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಬಲಪಡಿಸಲಾಗುವುದು ಎಂದರು.


ಬೆಂಗಳೂರಿನ ಆಡಳಿತಕ್ಕೆ ಹೊಸ ದಿಕ್ಕು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ರಚನೆಯ ನಂತರ ನಡೆಯಲಿರುವ ಮೊದಲ ಚುನಾವಣೆಯಾಗಿರುವುದರಿಂದ ಈ ಚುನಾವಣೆ ರಾಜ್ಯ ರಾಜಕೀಯದಲ್ಲೂ ಮಹತ್ವ ಪಡೆದಿದೆ. ಬೆಂಗಳೂರಿನ ಸಮಗ್ರ ಅಭಿವೃದ್ಧಿ, ಮೂಲಸೌಕರ್ಯ, ಸಂಚಾರ, ಸ್ವಚ್ಛತೆ ಹಾಗೂ ನಾಗರಿಕ ಸೇವೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಿರ್ವಹಿಸುವ ಉದ್ದೇಶದಿಂದ ಜಿಬಿಎ ವ್ಯವಸ್ಥೆ ಜಾರಿಗೆ ತರಲಾಗಿದೆ.

ಚುನಾವಣೆ ಆಯೋಗವು ಮತದಾರರ ಪಟ್ಟಿ ಪರಿಷ್ಕರಣೆ, ವಾರ್ಡ್ ಮರು ವಿಂಗಡಣೆ ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಿದ ಬಳಿಕ ಚುನಾವಣಾ ವೇಳಾಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸುವ ನಿರೀಕ್ಷೆಯಿದೆ.

–ಸ್ವರ್ಣ ಭಾರತ್ ಟೈಮ್ಸ್

# ವಿದ್ಯುತ್ ಸಂಪರ್ಕ: ಆ.15ರವರೆಗೆ ಅವಕಾಶ



ಬೆಂಗಳೂರು: 'ಇದೇ ವರ್ಷ ಮೇ 31ರ ಒಳಗೆ ಪೂರ್ಣಗೊಂಡಿರುವ ಎಲ್ಲ ವಸತಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಸ್ವಾಧೀನಾನುಭವ ರ ಪ್ರಮಾಣಪತ್ರದಿಂದ (ಒ.ಸಿ) ವಿನಾಯಿತಿ ನೀಡಲಾಗಿದ್ದು, ಅರ್ಜಿ ಸಲ್ಲಿಸಲು ಆಗಸ್ಟ್ 15ರವರೆಗೆ ಅವಕಾಶ ನೀಡಲಾಗುವುದು' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒ.ಸಿ ಸಿ.ಸಿ ಸಂಬಂಧಿಸಿದಂತೆ ವಿನಾಯಿತಿ ನೀಡಬೇಕು ಎಂದು ರಾಜ್ಯದ ಎಲ್ಲ ಕಡೆಗಳಿಂದ ಮನವಿ ಬಂದಿತ್ತು. ಹೀಗಾಗಿ ಅವಕಾಶ ಕಲ್ಪಿಸಿದ್ದೇವು. ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸಲು ಹೆಚ್ಚಿನ ಕಾಲಾವಕಾಶ ನೀಡಬೇಕೆಂದು ಕೆಲವರು ಮನವಿ ಮಾಡಿದ್ದಾರೆ' ಎಂದರು

ವಾಣಿಜ್ಯ ಕಟ್ಟಡಗಳಿಗೂ ವಿನಾಯಿತಿ ನೀಡಬೇಕೆಂಬ ಬೇಡಿಕೆ ಬಗ್ಗೆ ಕೇಳಿದಾಗ, 'ಬೇಕಾದಷ್ಟು ಬೇಡಿಕೆಗಳು ಇರುತ್ತವೆ. ಆದರೆ, ಸುಪ್ರೀಂ ಕೋರ್ಟ್ ತೀರ್ಪು ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಬೇಕಲ್ಲವೇ' ಎಂದರು.

ವಾರ್ಷಿಕ * 3,806 ಕೋಟಿ ಹೊರೆ: 'ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ವಿಬಿ ಜಿ ರಾಮ್ ಜಿ' ಯೋಜನೆಯ ವಿರುದ್ಧ ನಾವು ಕೋರ್ಟ್ ಮೆಟ್ಟಿಲು ಏರಿದ್ದೇವೆ. ಯೋಜನೆಯಲ್ಲಿ ಶೇ 40 ರಷ್ಟು ವೆಚ್ಚ ಭರಿಸಲು ಸಾಧ್ಯವಿಲ್ಲ ಎಂದೂ ಹೇಳಿದ್ದೇವೆ. ಷರತ್ತಿನ ಆಧಾರದಲ್ಲಿ ಯೋಜನೆ ಜಾರಿ ಮಾಡಬೇಕಾಗಿದೆ. ನಮ್ಮ ರಾಜ್ಯಕ್ಕೆ ಇದರಿಂದ ವಾರ್ಷಿಕ ? 3,806 ಕೋಟಿ ಹೊರೆ ಬೀಳಲಿದೆ' ಎಂದು ಮುಖ್ಯಮಂತ್ರಿ ಹೇಳಿದರು.

'ಪಂಚಾಯಿತಿಗಳಲ್ಲೂ ದಾಖಲೆ ಗ್ಯಾರಂಟಿ ಶುದ್ಧೀಕರಣಕ್ಕೆ ನೀಡಲಾಗುತ್ತಿದೆ. ಎಲ್ಲ ರಸ್ತೆಗಳನ್ನು ಸರ್ಕಾರಿ ರಸ್ತೆಗಳಾಗಿ ಘೋಷಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ಕಾನೂನು ಅವಕಾಶ ಮಾಡಿಕೊಡುತ್ತೇವೆ' ಎಂದರು.

ವರದಿ ಪಡೆದು ಬಸ್ ದರ ಏರಿಕೆ: 'ಬಸ್ ಪ್ರಯಾಣ ದರ ಹೆಚ್ಚಳದ ಬಗ್ಗೆ ಚರ್ಚೆ ಮಾಡಲಾಗಿದೆಯೇ' ಎಂಬ ಪ್ರಶ್ನೆಗೆ, 'ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಾಗಿದ್ದು, ಈ ವಿಚಾರದಲ್ಲಿ ಅಧಿಕಾರಿಗಳು ಗಾಬರಿ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪ್ರಸ್ತಾವ ಸಲ್ಲಿಸುವಂತೆ ಅಧಿಕಾರಿಗಳಿಗೆ ಹೇಳಿದ್ದೇವೆ. ತಾಂತ್ರಿಕವಾಗಿ ಎಷ್ಟು ನಷ್ಟವಾಗುತ್ತಿದೆ ಎಂದು ಪರಿಶೀಲಿಸಿ ದರ ಹೆಚ್ಚಿಸುವ ಬಗ್ಗೆ ತೀರ್ಮಾನಿಸುತ್ತೇವೆ' ಎಂದರು.

ವಿದೇಶಿ ಹೂಡಿಕೆ ಸಚಿವಾಲಯದ ಬಗ್ಗೆ ಕೇಳಿದಾಗ, 'ಅದಕ್ಕೆ ಹೊಸರೂಪ ನೀಡಲಾಗುತ್ತಿದೆ. ಸಚಿವ ಜಿ. ಪರಮೇಶ್ವರ ನೇತೃತ್ವದಲ್ಲಿ ಸಮಿತಿ ರಚಿಸಿದ್ದು, ಈ ಕುರಿತ ಸಲಹೆಗಳನ್ನು ಸಂಗ್ರಹಿಸಿ ಸಮಿತಿಯು ಮುಂದಿನ ಸಚಿವ ಸಂಪುಟಕ್ಕೆ ವರದಿ ನೀಡಲಿದೆ ಎಂದರು.

# 64ನೇ ವಸಂತಕ್ಕೆ ಕಾಲಿಟ್ಟ ಕರುನಾಡ ಚಕ್ರವರ್ತಿ ಶಿವರಾಜ್‌ಕುಮಾರ್

## ಚಿತ್ರರಂಗದ ಗಣ್ಯರಿಂದ ಶುಭಾಶಯಗಳ ಮಹಾಪೂರ; ಅಭಿಮಾನಿಗಳಿಂದ ರಾಜ್ಯಾದ್ಯಂತ ಸಂಭ್ರಮ

ಬೆಂಗಳೂರು । ಜುಲೈ 12: ಕನ್ನಡ ಚಿತ್ರರಂಗದ ಹೆಮ್ಮೆಯ ನಟ, ಕರುನಾಡ ಚಕ್ರವರ್ತಿ ಡಾ. ಶಿವರಾಜ್‌ಕುಮಾರ್ ಅವರು ಜುಲೈ 12, 2026ರಂದು ತಮ್ಮ 64ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ಈ ವಿಶೇಷ ಸಂದರ್ಭದಲ್ಲಿ ಕನ್ನಡ ಚಿತ್ರರಂಗದ ಅನೇಕ ಖ್ಯಾತ ನಟರು, ನಿರ್ದೇಶಕರು, ತಂತ್ರಜ್ಞರು ಹಾಗೂ ಲಕ್ಷಾಂತರ ಅಭಿಮಾನಿಗಳು ಸಾಮಾಜಿಕ ಜಾಲತಾಣಗಳ ಮೂಲಕ ಹೃತ್ಪೂರ್ವಕ ಶುಭಾಶಯಗಳನ್ನು ಸಲ್ಲಿಸಿದರು.





ನಟ ರಿಷಬ್ ಶೆಟ್ಟಿ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಶಿವರಾಜ್‌ಕುಮಾರ್ ಅವರನ್ನು "ಕರುನಾಡ ಚಕ್ರವರ್ತಿ" ಎಂದು ಸಂಬೋಧಿಸಿ, "ನಮ್ಮೆಲ್ಲರ ಪ್ರೀತಿಯ ಶಿವರಾಜ್‌ಕುಮಾರ್ ಅಣ್ಣ ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು" ಎಂದು ಬರೆದು ಗೌರವ ಸಲ್ಲಿಸಿದರು.

ಖ್ಯಾತ ನೃತ್ಯ ನಿರ್ದೇಶಕ ಜಾನಿ ಮಾಸ್ಟರ್, ಶಿವರಾಜ್‌ಕುಮಾರ್ ಅವರೊಂದಿಗೆ ಕೆಲಸ ಮಾಡಿದ ಅನುಭವವನ್ನು ಹಂಚಿಕೊಂಡು, "ನಿಮ್ಮಂತಹ ವಿನಯಶೀಲ ಮತ್ತು ಸಮರ್ಪಿತ ಕಲಾವಿದರೊಂದಿಗೆ ಕೆಲಸ ಮಾಡುವುದು ನನ್ನ ಜೀವನದ ಅಮೂಲ್ಯ ಅನುಭವವಾಗಿದೆ. ನಿಮ್ಮಿಂದ ಕಲಿತ ಪ್ರತಿಯೊಂದು ಕ್ಷಣವೂ ನನ್ನ ಬದುಕಿನ ಪಾಠವಾಗಿದೆ. ನಿಮಗೆ ಉತ್ತಮ ಆರೋಗ್ಯ, ಸಂತೋಷ ಮತ್ತು ಇನ್ನಷ್ಟು ಬ್ಲಾಕ್‌ಬಸ್ಟರ್ ಯಶಸ್ಸುಗಳು ದೊರೆಯಲಿ" ಎಂದು ಹಾರೈಸಿದರು.

'ಟಗರು' ಚಿತ್ರದ ಖ್ಯಾತ ನಟ ಧನಂಜಯ್, ವಿಶೇಷ ಪೋಸ್ಟರ್ ಹಂಚಿಕೊಂಡು "ಹ್ಯಾಪಿ ಬರ್ತ್‌ಡೇ ಶಿವಣ್ಣ" ಎಂದು ಶುಭಾಶಯ ಕೋರಿದರು.

ಇದೇ ವೇಳೆ 'ಸಪ್ತ ಸಾಗರದಾಚೆ ಎಲ್ಲೋ' ಖ್ಯಾತಿಯ ನಿರ್ದೇಶಕ ಹೇಮಂತ್ ಎಂ. ರಾವ್, ಶಿವರಾಜ್‌ಕುಮಾರ್ ಅಭಿನಯದ ಬಹುನಿರೀಕ್ಷಿತ '666: ಆಪರೇಷನ್ ಡ್ರೀಮ್ ಥಿಯೇಟರ್' ಚಿತ್ರದ ಚಿತ್ರೀಕರಣದ ಅಪರೂಪದ ವಿಡಿಯೊ ಹಂಚಿಕೊಂಡು, "ನಿಮ್ಮ ಜೊತೆಯಲ್ಲಿ ಕೆಲಸ ಮಾಡುವುದು ನನ್ನ ವೃತ್ತಿಜೀವನದ ಅತ್ಯಂತ ದೊಡ್ಡ ಭಾಗ್ಯಗಳಲ್ಲಿ ಒಂದಾಗಿದೆ. ನಿಮ್ಮ ಅಭಿನಯದ ಮ್ಯಾಜಿಕ್ ಸದಾ ಪ್ರೇರಣೆಯಾಗಿದೆ. ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು ಶಿವಣ್ಣ" ಎಂದು ಬರೆದು ಪ್ರೀತಿ ವ್ಯಕ್ತಪಡಿಸಿದರು.

ಅಭಿನಯದ ಮೂಲಕ ಅಜರಾಮರ ಸ್ಥಾನ



ಡಾ. ಶಿವರಾಜ್‌ಕುಮಾರ್ ಅವರು ಕಳೆದ ಮೂರು ದಶಕಗಳಿಗೂ ಹೆಚ್ಚು ಕಾಲ ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ. 'ಓಂ', 'ಜನುಮದ ಜೋಡಿ', 'ನಮ್ಮೂರ ಮಂದಾರ ಹೂವೇ', 'ಸಿಂಹದ ಮರಿ', 'ಎಕೆ–47', 'ಜೋಗಿ', 'ಭಜರಂಗಿ', 'ಶಿವಲಿಂಗ', 'ಮುಫ್ತಿ', 'ಟಗರು' ಸೇರಿದಂತೆ ಅನೇಕ ಸೂಪರ್‌ಹಿಟ್ ಚಿತ್ರಗಳಲ್ಲಿ ಅಭಿನಯಿಸಿ ಕನ್ನಡ ಸಿನಿರಂಗದ ಅತ್ಯಂತ ಜನಪ್ರಿಯ ನಟರಲ್ಲಿ ಒಬ್ಬರಾಗಿದ್ದಾರೆ.

ಇತ್ತೀಚೆಗೆ ಅವರು ಸೂಪರ್‌ಸ್ಟಾರ್ ರಜನಿಕಾಂತ್ ಅಭಿನಯದ 'ಜೈಲರ್ 2' ಚಿತ್ರದಲ್ಲಿ ವಿಶೇಷ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಅವರ ಅಭಿನಯ ಮತ್ತೊಮ್ಮೆ ಸಿನಿಪ್ರಿಯರ ಮೆಚ್ಚುಗೆಗೆ ಪಾತ್ರವಾಗಿದೆ. ಅವರ ಮುಂದಿನ ಸಿನಿಮಾ '666: ಆಪರೇಷನ್ ಡ್ರೀಮ್ ಥಿಯೇಟರ್' ಕುರಿತು ಅಭಿಮಾನಿಗಳಲ್ಲಿ ಈಗಾಗಲೇ ಅಪಾರ ನಿರೀಕ್ಷೆ ಮೂಡಿದೆ.

ರಾಜ್ಯಾದ್ಯಂತ ಅಭಿಮಾನಿಗಳ ಸಂಭ್ರಮ

ಶಿವರಾಜ್‌ಕುಮಾರ್ ಅವರ ಜನ್ಮದಿನದ ಅಂಗವಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ಅಭಿಮಾನಿಗಳು ಕೇಕ್ ಕತ್ತರಿಸಿ ಸಂಭ್ರಮಿಸಿದರು. ರಕ್ತದಾನ ಶಿಬಿರ, ಅನ್ನಸಂತರ್ಪಣೆ, ಗಿಡ ನೆಡುವ ಕಾರ್ಯಕ್ರಮ, ಆರೋಗ್ಯ ತಪಾಸಣಾ ಶಿಬಿರ ಸೇರಿದಂತೆ ಹಲವು ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ತಮ್ಮ ನೆಚ್ಚಿನ ನಟನಿಗೆ ವಿಶಿಷ್ಟವಾಗಿ ಶುಭಾಶಯ ಸಲ್ಲಿಸಿದರು.

ಸರಳತೆ, ಸಮರ್ಪಣೆ ಮತ್ತು ಯಶಸ್ಸಿನ ಸಂಕೇತ

ಅಭಿನಯ ಮಾತ್ರವಲ್ಲದೆ ತಮ್ಮ ಸರಳ ವ್ಯಕ್ತಿತ್ವ, ಶಿಸ್ತು, ವಿನಯ ಹಾಗೂ ಸಮಾಜಮುಖಿ ಚಿಂತನೆಯಿಂದ ಡಾ. ಶಿವರಾಜ್‌ಕುಮಾರ್ ಅವರು ಕನ್ನಡಿಗರ ಮನದಲ್ಲಿ ವಿಶೇಷ ಸ್ಥಾನವನ್ನು ಗಳಿಸಿದ್ದಾರೆ. ಹಲವು ತಲೆಮಾರಿನ ಕಲಾವಿದರಿಗೆ ಅವರು ಇಂದು ಕೂಡ ಪ್ರೇರಣೆಯಾಗಿ ನಿಂತಿದ್ದಾರೆ.

ಕರುನಾಡ ಚಕ್ರವರ್ತಿ ಡಾ. ಶಿವರಾಜ್‌ಕುಮಾರ್ ಅವರಿಗೆ ಸ್ವರ್ಣ ಭಾರತ್ ಟೈಮ್ಸ್ ಕುಟುಂಬದ ವತಿಯಿಂದ ಹುಟ್ಟುಹಬ್ಬದ ಹಾರ್ದಿಕ ಶುಭಾಶಯ ಗಳು. ಉತ್ತಮ ಆರೋಗ್ಯ, ದೀರ್ಘಾಯುಷ್ಯ ಹಾಗೂ ಇನ್ನಷ್ಟು ಯಶಸ್ವಿ ಚಿತ್ರಗಳನ್ನು ಕನ್ನಡ ಚಿತ್ರರಂಗಕ್ಕೆ ನೀಡಲೆಂದು ಹಾರೈಸುತ್ತೇವೆ.

# UPI ಪಾವತಿ ಬಳಕೆದಾರರಿಗೆ ಉಚಿತ ಸೇವೆಗೆ ಬ್ರೇಕ್–ವಹಿವಾಟಿಗೆ ಶುಲ್ಕ ವಿಧಿಸುವ ಸಾಧ್ಯತೆ

ಯುಪಿಐ (UPI) ಮೂಲಕ ಹಣಕಾಸು ವ್ಯವಹಾರಗಳನ್ನು ಮಾಡುತ್ತಿರುವವರಿಗೆ ಕೇಂದ್ರ ಸರ್ಕಾರದಿಂದ ಮಹತ್ವದ ಬದಲಾವಣೆ ಬರಬಹುದಾಗಿದೆ. ಪ್ರಸ್ತುತ ಉಚಿತವಾಗಿರುವ ಯುಪಿಐ ವ್ಯವಹಾರಗಳಿಗೆ ಮುಂದಿನ ದಿನಗಳಲ್ಲಿ ಕೆಲವು ವರ್ಗದ ವ್ಯವಹಾರಗಳಿಗೆ ಶುಲ್ಕ ವಿಧಿಸುವ ಕುರಿತು ಕೇಂದ್ರ ಸರ್ಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ (RBI) ಚರ್ಚೆ ನಡೆಸುತ್ತಿವೆ.




ಈಗ ಯುಪಿಐ ಮೂಲಕ ಎಷ್ಟೇ ದೊಡ್ಡ ಮೊತ್ತದ ವ್ಯವಹಾರ ಮಾಡಿದರೂ ಯಾವುದೇ ಶುಲ್ಕ ಇರುವುದಿಲ್ಲ. ಕಳೆದ ಐದು ವರ್ಷಗಳಿಂದ ಯುಪಿಐ ವ್ಯವಹಾರಗಳಿಗೆ ಮರ್ಚೆಂಟ್ ಡಿಸ್ಕೌಂಟ್ ರೇಟ್ (MDR) ಅನ್ನು ಶೂನ್ಯವಾಗಿಯೇ ಇರಿಸಲಾಗಿದೆ. ಆದರೆ, ದೊಡ್ಡ ವ್ಯಾಪಾರ ಸಂಸ್ಥೆಗಳು ಮತ್ತು ಇ–ಕಾಮರ್ಸ್ ಕಂಪನಿಗಳ ಯುಪಿಐ ವ್ಯವಹಾರಗಳಿಗೆ ಮರ್ಚೆಂಟ್ ಶುಲ್ಕ ವಿಧಿಸುವ ಪ್ರಸ್ತಾವನೆ ಸರ್ಕಾರದ ಪರಿಗಣನೆಯಲ್ಲಿದೆ.

ಈ ಸಂಬಂಧದ ಕರಡು ಪ್ರಸ್ತಾವನೆ ಈಗ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಬಾಕಿಯಿದೆ. ಅನುಮೋದನೆ ದೊರೆತ ಬಳಿಕ ಹೊಸ ನಿಯಮಗಳು ಜಾರಿಗೆ ಬರಲಿವೆ. ಈ ಕುರಿತು ಕೇಂದ್ರ ಸರ್ಕಾರ ಅಂತಿಮ ಹಂತದ ಚರ್ಚೆ ನಡೆಸುತ್ತಿದ್ದು, ಶೀಘ್ರದಲ್ಲೇ ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ.ಪ್ರಸ್ತಾವನೆಯ ಪ್ರಕಾರ, ದೊಡ್ಡ ವ್ಯಾಪಾರಿಗಳು ಹಾಗೂ ಇ–ಕಾಮರ್ಸ್ ಸಂಸ್ಥೆಗಳಿಗಷ್ಟೇ ಮರ್ಚೆಂಟ್ ಶುಲ್ಕ ಅನ್ವಯವಾಗಲಿದೆ. ಇದರಿಂದ ಯುಪಿಐ ಪಾವತಿ ಸೇವೆ ನೀಡುವ ಬ್ಯಾಂಕ್ಗಳು ಹಾಗೂ ಪಾವತಿ ಆಯಪ್ಗಳಿಗೆ ಹೆಚ್ಚುವರಿ ಆದಾಯ ದೊರೆಯಲಿದೆ.

ವಾರ್ಷಿಕ 40 ಲಕ್ಷಕ್ಕಿಂತ ಹೆಚ್ಚು ವಹಿವಾಟು (ಟರ್ನ್‌ಓವರ್) ಹೊಂದಿರುವ ವ್ಯಾಪಾರಿಗಳಿಗೆ 5ರಿಂದ 7 ಬೇಸಿಸ್ ಪಾಯಿಂಟ್ಗಳವರೆಗೆ MDR ವಿಧಿಸುವ ಪ್ರಸ್ತಾವನೆ ಇದೆ. 10,000ಕ್ಕಿಂತ ಹೆಚ್ಚಿನ ಯುಪಿಐ ವ್ಯವಹಾರಗಳ ಮೇಲೆ ಸುಮಾರು 5ರಿಂದ 7ರವರೆಗೆ ಮರ್ಚೆಂಟ್ ಶುಲ್ಕ ವಿಧಿಸುವ ಸಾಧ್ಯತೆ ಇದೆ.

ಸಣ್ಣ ವ್ಯಾಪಾರಿಗಳು ಮತ್ತು ಸಾಮಾನ್ಯ ಗ್ರಾಹಕರಿಗೆ ಆತಂಕ ಬೇಡ

ವಾರ್ಷಿಕ 40 ಲಕ್ಷಕ್ಕಿಂತ ಕಡಿಮೆ ಟರ್ನ್‌ಓವರ್ ಹೊಂದಿರುವ ಸಣ್ಣ ವ್ಯಾಪಾರಿಗಳಿಗೆ ಯಾವುದೇ ಹೆಚ್ಚುವರಿ ಶುಲ್ಕ ವಿಧಿಸಲಾಗುವುದಿಲ್ಲ. ಹಾಗೆಯೇ, ಸಾಮಾನ್ಯ ಯುಪಿಐ ಬಳಕೆದಾರರು ಹಿಂದಿನಂತೆ ಉಚಿತವಾಗಿಯೇ ಹಣ ವರ್ಗಾವಣೆ ಮಾಡಬಹುದು. ಈ ಶುಲ್ಕವು ಕೇವಲ ದೊಡ್ಡ ವ್ಯಾಪಾರಿಗಳಿಂದ ಮಾತ್ರ ವಸೂಲಾಗುವ ಸಾಧ್ಯತೆ ಇದೆ.

ಈ ನಿರ್ಧಾರದ ಹಿಂದಿನ ಕಾರಣವೇನು?

ಪ್ರಸ್ತುತ ಜೀರೋ MDR ನೀತಿಯಿಂದ PhonePe, Google Pay, Paytm ಸೇರಿದಂತೆ ಯುಪಿಐ ಪಾವತಿ ಆಯಪ್ಗಳಿಗೆ ವ್ಯವಹಾರಗಳಿಂದ ನೇರ ಆದಾಯ ದೊರೆಯುತ್ತಿಲ್ಲ. ಸರ್ಕಾರದಿಂದ ಸಿಗುವ ಪ್ರೋತ್ಸಾಹಧನವೂ ಯುಪಿಐ ವ್ಯವಸ್ಥೆಯ ನಿರ್ವಹಣೆಗೆ ಸಾಕಾಗುತ್ತಿಲ್ಲ ಎಂದು ಕಂಪನಿಗಳು ಹೇಳುತ್ತಿವೆ. ಹೀಗಾಗಿ, ಯುಪಿಐ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಹಾಗೂ ಪಾವತಿ ಸೇವಾ ಸಂಸ್ಥೆಗಳಿಗೆ ಸ್ಥಿರ ಆದಾಯ ಒದಗಿಸಲು ದೊಡ್ಡ ವ್ಯಾಪಾರಿಗಳಿಂದ ಮರ್ಚೆಂಟ್ ಶುಲ್ಕ ವಸೂಲು ಮಾಡುವತ್ತ ಸರ್ಕಾರ ಮುಂದಾಗಿದೆ.

ಕ್ರೀಡಾ ವಿಭಾಗ । ವಿಶೇಷ ವರದಿ

# ಅರ್ಜೆಂಟೀನಾ ಕನಸು ನುಚ್ಚುನೂರು!

## ಸ್ಪೇನ್ ಮುಡಿಗೆ ವಿಶ್ವ ಫುಟ್‌ಬಾಲ್ ಕಿರೀಟ




ವಿಶ್ವ ಫುಟ್‌ಬಾಲ್ ಅಭಿಮಾನಿಗಳ ಚಿತ್ತ ಸೆಳೆದ ಫೈನಲ್ ಪಂದ್ಯದಲ್ಲಿ ಸ್ಪೇನ್ ತಂಡ ಶಿಸ್ತುಬದ್ಧ ಹಾಗೂ ಆಕ್ರಮಣಕಾರಿ ಆಟದ ಮೂಲಕ ಚಾಂಪಿಯನ್ ಪಟ್ಟವನ್ನು ತನ್ನದಾಗಿಸಿಕೊಂಡಿದೆ. ಮತ್ತೊಂದೆಡೆ, ಪ್ರಶಸ್ತಿಯ ಕನಸು ಹೊತ್ತಿದ್ದ ಅರ್ಜೆಂಟೀನಾ ತಂಡ ಅಂತಿಮ ಹಂತದಲ್ಲಿ ನಿರಾಸೆ ಅನುಭವಿಸಿದ್ದು, ಅಭಿಮಾನಿಗಳ ಕನಸು ನುಚ್ಚುನೂರಾಗಿದೆ.

ಪಂದ್ಯದ ಆರಂಭದಿಂದಲೇ ಸ್ಪೇನ್ ಚೆಂಡಿನ ಮೇಲಿನ ಹಿಡಿತವನ್ನು ಕಾಯ್ದುಕೊಂಡು ಎದುರಾಳಿಯ ಮೇಲೆ ನಿರಂತರ ಒತ್ತಡ ಹೇರಿತು. ಮಧ್ಯಮೈದಾನದಲ್ಲಿ ನಿಖರ ಪಾಸ್‌ಗಳ ವಿನಿಮಯ, ವೇಗದ ದಾಳಿ ಹಾಗೂ ಸಂಘಟಿತ ರಕ್ಷಣೆಯ ಮೂಲಕ ಪಂದ್ಯವನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿತು. ಸ್ಪೇನ್ ಆಟಗಾರರ ಸಮನ್ವಯ ಮತ್ತು ತಾಂತ್ರಿಕ ಕೌಶಲ್ಯ ಪಂದ್ಯದ ಪ್ರಮುಖ ಆಕರ್ಷಣೆಯಾಗಿತ್ತು.

ಅರ್ಜೆಂಟೀನಾ ಕೂಡ ಆರಂಭದಲ್ಲಿ ಕೆಲವು ಅಪಾಯಕಾರಿ ದಾಳಿಗಳನ್ನು ನಡೆಸಿದರೂ, ಸ್ಪೇನ್‌ನ ಬಲಿಷ್ಠ ರಕ್ಷಣಾ ಸಾಲು ಆ ಅವಕಾಶಗಳನ್ನು ಸಮರ್ಥವಾಗಿ ತಡೆದಿತು. ಗೋಲು ಗಳಿಸಲು ಹಲವು ಪ್ರಯತ್ನಗಳನ್ನು ಮಾಡಿದರೂ ಅಂತಿಮ ಕ್ಷಣದಲ್ಲಿ ನಿಖರತೆ ಕೊರತೆಯಿಂದ ಅರ್ಜೆಂಟೀನಾ ಹಿನ್ನಡೆ ಅನುಭವಿಸಿತು. ನಿರ್ಣಾಯಕ ಕ್ಷಣಗಳಲ್ಲಿ ಸ್ಪೇನ್ ಆಟಗಾರರು ತಾಳ್ಮೆಯಿಂದ ಆಟವಾಡಿ ಪಂದ್ಯವನ್ನು ತಮ್ಮ ಪರ ತಿರುಗಿಸಿಕೊಂಡರು.

ದ್ವಿತೀಯಾರ್ಧದಲ್ಲೂ ಸ್ಪೇನ್ ತನ್ನ ಲಯವನ್ನು ಮುಂದುವರಿಸಿತು. ವೇಗದ ಪ್ರತಿದಾಳಿಗಳು ಹಾಗೂ ಶಿಸ್ತುಬದ್ಧ ತಂಡದ ಆಟದಿಂದ ಎದುರಾಳಿಗೆ ಹೆಚ್ಚಿನ ಅವಕಾಶ ನೀಡದೆ ಮೇಲುಗೈ ಸಾಧಿಸಿತು. ಗೋಲ್‌ಕೀಪರ್ ಸೇರಿದಂತೆ ರಕ್ಷಣಾ ವಿಭಾಗದ ಆಟಗಾರರು ಅದ್ಭುತ ಪ್ರದರ್ಶನ ನೀಡಿ ತಂಡದ ಗೆಲುವಿನಲ್ಲಿ ಮಹತ್ವದ ಪಾತ್ರವಹಿಸಿದರು.

ಈ ಜಯದೊಂದಿಗೆ ಸ್ಪೇನ್ ವಿಶ್ವ ಫುಟ್‌ಬಾಲ್‌ನಲ್ಲಿ ಮತ್ತೊಂದು ಸ್ಮರಣೀಯ ಅಧ್ಯಾಯವನ್ನು ಬರೆದಿದ್ದು, ಆಟಗಾರರು, ತರಬೇತುದಾರರು ಮತ್ತು ಅಭಿಮಾನಿಗಳು ಸಂಭ್ರಮಾಚರಣೆಯಲ್ಲಿ ತೊಡಗಿದರು. ಕ್ರೀಡಾ ತಜ್ಞರು ಸ್ಪೇನ್ ತಂಡದ ಸಂಘಟಿತ ಆಟ, ಯುವ ಪ್ರತಿಭೆಗಳ ಪ್ರದರ್ಶನ ಮತ್ತು ತಾಂತ್ರಿಕ ಸಾಮರ್ಥ್ಯವನ್ನು ಪ್ರಶಂಸಿಸಿದ್ದಾರೆ.

ಇನ್ನೊಂದೆಡೆ, ಅರ್ಜೆಂಟೀನಾ ತಂಡದ ಹೋರಾಟ ಮೆಚ್ಚುಗೆಗೆ ಪಾತ್ರವಾದರೂ, ನಿರ್ಣಾಯಕ ಕ್ಷಣಗಳಲ್ಲಿ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಲು ಸಾಧ್ಯವಾಗದಿರುವುದು ಸೋಲಿಗೆ ಪ್ರಮುಖ ಕಾರಣವೆಂದು ವಿಶ್ಲೇಷಿಸಲಾಗಿದೆ. ಈ ಸೋಲಿನ ಬಳಿಕ ತಂಡ ಮುಂದಿನ ಅಂತರರಾಷ್ಟ್ರೀಯ ಟೂರ್ನಿಗಳಿಗೆ ಹೊಸ ತಂತ್ರ ಹಾಗೂ ಸಿದ್ಧತೆಯೊಂದಿಗೆ ಮರಳುವ ವಿಶ್ವಾಸ ವ್ಯಕ್ತಪಡಿಸಿದೆ.

### ಪಂದ್ಯದ ಮುಖ್ಯಾಂಶಗಳು:

- ಸ್ಪೇನ್‌ನ ಸಂಘಟಿತ ಹಾಗೂ ಆಕ್ರಮಣಕಾರಿ ಆಟ ಗಮನ ಸೆಳೆಯಿತು.
- ಚೆಂಡಿನ ಮೇಲಿನ ನಿಯಂತ್ರಣದಲ್ಲಿ ಸ್ಪೇನ್ ಮೇಲುಗೈ ಸಾಧಿಸಿತು.
- ಅರ್ಜೆಂಟೀನಾ ಹಲವು ಅವಕಾಶಗಳನ್ನು ಸೃಷ್ಟಿಸಿದರೂ ಗೋಲು ಗಳಿಸಲು ವಿಫಲವಾಯಿತು.
- ಸ್ಪೇನ್‌ನ ರಕ್ಷಣಾ ವಿಭಾಗ ಮತ್ತು ಗೋಲ್‌ಕೀಪರ್ ಅತ್ಯುತ್ತಮ ಪ್ರದರ್ಶನ ನೀಡಿದರು.
- ಗೆಲುವಿನೊಂದಿಗೆ ಸ್ಪೇನ್ ವಿಶ್ವ ಫುಟ್‌ಬಾಲ್‌ನಲ್ಲಿ ಮತ್ತೊಂದು ಐತಿಹಾಸಿಕ ಸಾಧನೆ ದಾಖಲಿಸಿತು.

# ಮಗನ ಅಗಲಿಕೆಯ ನೋವಿನಲ್ಲೇ ಮೌನವಾದ ಗಾನಕೋಗಿಲೆ ಎಸ್. ಜಾನಕಿ

## ದಕ್ಷಿಣ ಭಾರತದ ಸಂಗೀತ ಲೋಕದ ಯುಗಾಂತ; 88ನೇ ವಯಸ್ಸಿನಲ್ಲಿ ಗಾನ ಸರಸ್ವತಿಗೆ ವಿದಾಯ



ಬೆಂಗಳೂರು/ಮೈಸೂರು, ಜು. 11: ದಕ್ಷಿಣ ಭಾರತದ ಸಂಗೀತ ಲೋಕದ ಅಮೂಲ್ಯ ಧ್ವನಿಯಾಗಿದ್ದ, ಲಕ್ಷಾಂತರ ಅಭಿಮಾನಿಗಳ ಮನ ಗೆದ್ದಿದ್ದ ಖ್ಯಾತ ಹಿನ್ನೆಲೆ ಗಾಯಕಿ ಗಾನಕೋಗಿಲೆ ಎಸ್. ಜಾನಕಿ ಅವರು 88ನೇ ವಯಸ್ಸಿನಲ್ಲಿ ವಯೋಸಹಜ ಅನಾರೋಗ್ಯದಿಂದ ನಿಧನರಾಗಿದ್ದಾರೆ. ಅವರ ಅಗಲಿಕೆಯೊಂದಿಗೆ ಭಾರತೀಯ ಚಿತ್ರರಂಗವು ತನ್ನ ಅತ್ಯಂತ ಶ್ರೇಷ್ಠ ಹಾಗೂ ವೈವಿಧ್ಯಮಯ ಹಿನ್ನೆಲೆ ಗಾಯಕಿಯೊಬ್ಬರನ್ನು ಕಳೆದುಕೊಂಡಿದೆ.

ಜಾನಕಿ ಅವರ ನಿಧನವು ಸಂಗೀತ ಪ್ರಿಯರಿಗೆ ಮಾತ್ರವಲ್ಲದೆ ಕನ್ನಡ, ತಮಿಳು, ತೆಲುಗು, ಮಲಯಾಳಂ ಸೇರಿದಂತೆ ಭಾರತೀಯ ಚಿತ್ರರಂಗಕ್ಕೂ ತುಂಬಲಾರದ ನಷ್ಟವಾಗಿದೆ. ತಮ್ಮ ಅಪರೂಪದ ಕಂಠಸಿರಿಯಿಂದ ಆರು ದಶಕಗಳಿಗೂ ಹೆಚ್ಚು ಕಾಲ ಸಂಗೀತ ಲೋಕವನ್ನು ಆಳಿದ ಅವರು, ಅನೇಕ ಪೀಳಿಗೆಗಳ ಮನಸ್ಸಿನಲ್ಲಿ ಅಳಿಸಲಾಗದ ಗುರುತು ಮೂಡಿಸಿದ್ದಾರೆ.

ಮಗನ ಅಗಲಿಕೆಯ ದುಃಖದಿಂದ ಕುಗ್ಗಿದ ತಾಯಿ

ಜಾನಕಿ ಅವರ ಕೊನೆಯ ದಿನಗಳು ಅತ್ಯಂತ ನೋವಿನಿಂದ ಕೂಡಿದ್ದವು. ಅವರಿಗೆ ಆಸರೆಯಾಗಿದ್ದ ಏಕೈಕ ಪುತ್ರ ಮುರಳಿ ಕೃಷ್ಣ (65) ಅವರು ಕೆಲವೇ ತಿಂಗಳುಗಳ ಹಿಂದೆ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದರು. ಆ ಆಘಾತವನ್ನು ಜಾನಕಿ ಅವರು ಎಂದಿಗೂ ಮರೆತಿರಲಿಲ್ಲ.

ತಾಯಿಯ ಆರೋಗ್ಯದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿದ್ದ ಮುರಳಿ ಕೃಷ್ಣ ಅವರ ಹಠಾತ್ ನಿಧನದಿಂದ ಜಾನಕಿ ಅವರು ಮಾನಸಿಕವಾಗಿ ಹಾಗೂ ದೈಹಿಕವಾಗಿ ತೀವ್ರವಾಗಿ ಕುಗ್ಗಿದ್ದರು. "ತಾಯಿಯ ಕಣ್ಣೆದುರೇ ಮಗನ ಅಂತ್ಯಕ್ರಿಯೆ ನಡೆಯುವುದು ಅತ್ಯಂತ ದುಃಖಕರ ಘಟನೆ" ಎಂದು ಅಂದು ಚಿತ್ರರಂಗದ ಅನೇಕ ಗಣ್ಯರು ಕಂಬನಿ ಮಿಡಿದಿದ್ದರು.

ಮುರಳಿ ಕೃಷ್ಣ ಯಾರು?

ಜಾನಕಿ ಅವರ ಏಕೈಕ ಪುತ್ರ ಮುರಳಿ ಕೃಷ್ಣ ಅವರು ತಮಿಳು ಹಾಗೂ ತೆಲುಗು ಚಿತ್ರರಂಗದಲ್ಲಿ ಕಾರ್ಯನಿರ್ವಹಿಸಿದ್ದರು. ಅವರು ಪ್ರಸಿದ್ಧ ಭರತನಾಟ್ಯ ಕಲಾವಿದರಾಗಿದ್ದು, ತಮ್ಮ ಗುರು ಉಮಾ ಅವರನ್ನು ವಿವಾಹವಾಗಿದ್ದರು. ಬಳಿಕ ವೈಯಕ್ತಿಕ ಕಾರಣಗಳಿಂದ ವಿಚ್ಛೇದನವಾದ ನಂತರ ಅವರು ತಮ್ಮ ತಾಯಿ ಎಸ್. ಜಾನಕಿ ಅವರೊಂದಿಗೇ ವಾಸಿಸುತ್ತಿದ್ದರು. ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ತಾಯಿಯನ್ನು ಅತ್ಯಂತ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು.

ಗಾನಕೋಗಿಲೆಯ ಅದ್ಭುತ ಸಂಗೀತ ಪಯಣ

ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಪಲ್ಲಪಟ್ಲ ಗ್ರಾಮದಲ್ಲಿ 1938ರ ಏಪ್ರಿಲ್ 23ರಂದು ಜನಿಸಿದ ಶಿಷ್ಟ್ಲಾ ಶ್ರೀರಾಮಮೂರ್ತಿ ಜಾನಕಿ (ಎಸ್. ಜಾನಕಿ) ಬಾಲ್ಯದಿಂದಲೇ ಸಂಗೀತದ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದರು.

1957ರಲ್ಲಿ ಬಿಡುಗಡೆಯಾದ ತೆಲುಗು ಚಿತ್ರದ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟ ಅವರು, ಬಳಿಕ ಕನ್ನಡ, ತಮಿಳು, ತೆಲುಗು, ಮಲಯಾಳಂ, ಹಿಂದಿ ಸೇರಿದಂತೆ ಸುಮಾರು 17ಕ್ಕೂ ಹೆಚ್ಚು ಭಾಷೆಗಳಲ್ಲಿ 45,000ಕ್ಕೂ ಅಧಿಕ ಹಾಡುಗಳನ್ನು ಹಾಡಿ ಭಾರತೀಯ ಸಂಗೀತ ಲೋಕದಲ್ಲಿ ಅಪರೂಪದ ದಾಖಲೆಯನ್ನು ನಿರ್ಮಿಸಿದರು.

ಕನ್ನಡಿಗರ ಮನಗೆದ್ದ ಧ್ವನಿ

ಡಾ. ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಶ್, ಶಂಕರ್ ನಾಗ್, ಅನಂತ್ ನಾಗ್, ಶಿವರಾಜ್‌ಕುಮಾರ್, ರವಿಚಂದ್ರನ್ ಸೇರಿದಂತೆ ಕನ್ನಡದ ಅನೇಕ ನಟರ ಚಿತ್ರಗಳಿಗೆ ಎಸ್. ಜಾನಕಿ ಅವರು ಅನೇಕ ಅಮರಗೀತೆಗಳನ್ನು ನೀಡಿದ್ದಾರೆ.

ಜಿ.ಕೆ. ವೆಂಕಟೇಶ್, ರಾಜನ್?ನಾಗೇಂದ್ರ, ಉಪೇಂದ್ರ ಕುಮಾರ್, ಹಂಸಲೇಖ, ಇಳಯರಾಜ, ಎಂ.ಎಸ್. ವಿಶ್ವನಾಥನ್, ಎ.ಆರ್. ರೆಹಮಾನ್ ಸೇರಿದಂತೆ ಹಲವು ದಿಗ್ಗಜ ಸಂಗೀತ ನಿರ್ದೇಶಕರೊಂದಿಗೆ ಕೆಲಸ ಮಾಡಿ ಸಂಗೀತ ಪ್ರಿಯರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದರು.

ಧ್ವನಿ ಬದಲಾವಣೆಯ ಅಪರೂಪದ ಪ್ರತಿಭೆ

ಎಸ್. ಜಾನಕಿ ಅವರ ಗಾಯನದ ವಿಶೇಷತೆ ಎಂದರೆ ಧ್ವನಿಯಲ್ಲಿನ ಅದ್ಭುತ ವೈವಿಧ್ಯತೆ. ಪುಟ್ಟ ಮಗುವಿನ ಧ್ವನಿಯಿಂದ ಹಿಡಿದು ವಯಸ್ಸಾದ ಮಹಿಳೆಯ ಧ್ವನಿವರೆಗೆ ಸಹಜವಾಗಿ ಹಾಡುವ ಅಪರೂಪದ ಸಾಮರ್ಥ್ಯ ಅವರಿಗಿತ್ತು. ಹಾಡಿನ ಭಾವನೆಗಳಿಗೆ ತಕ್ಕಂತೆ ಧ್ವನಿಯನ್ನು ರೂಪಿಸುವ ಅವರ ಕಲೆ ಅವರನ್ನು ಇತರ ಗಾಯಕರಿಗಿಂತ ವಿಭಿನ್ನರನ್ನಾಗಿಸಿತು. ಅದಕ್ಕಾಗಿಯೇ ಅವರನ್ನು "ಗಾನ ಸರಸ್ವತಿ" ಹಾಗೂ "ಗಾನಕೋಗಿಲೆ" ಎಂದು ಅಭಿಮಾನಿಗಳು ಪ್ರೀತಿಯಿಂದ ಕರೆಯುತ್ತಿದ್ದರು.

ಅಪಾರ ಗೌರವಗಳು ಮತ್ತು ಪ್ರಶಸ್ತಿಗಳು

ತಮ್ಮ ಸಂಗೀತ ಸಾಧನೆಗಾಗಿ ಎಸ್. ಜಾನಕಿ ಅವರು ಅನೇಕ ರಾಷ್ಟ್ರೀಯ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪಡೆದಿದ್ದಾರೆ.

– 4 ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು

– ವಿವಿಧ ರಾಜ್ಯ ಸರ್ಕಾರಗಳ 30ಕ್ಕೂ ಹೆಚ್ಚು ಅತ್ಯುತ್ತಮ ಗಾಯಕಿ ಪ್ರಶಸ್ತಿಗಳು

– ಜೀವಮಾನ ಸಾಧನೆಗಾಗಿ ಅನೇಕ ಪ್ರತಿಷ್ಠಿತ ಗೌರವಗಳು

– ದಕ್ಷಿಣ ಭಾರತದ ಸಂಗೀತ ಕ್ಷೇತ್ರದ ಅತ್ಯುನ್ನತ ಗೌರವಗಳಲ್ಲಿ ಹಲವಾರು ಸನ್ಮಾನಗಳು

2013ರಲ್ಲಿ ಭಾರತ ಸರ್ಕಾರ ನೀಡಲು ಮುಂದಾಗಿದ್ದ ಪದ್ಮಭೂಷಣ ಪ್ರಶಸ್ತಿಯನ್ನು ವಿನಯದಿಂದ ನಿರಾಕರಿಸಿ, ಕಲಾವಿದರಿಗೆ ಸಮಯೋಚಿತ ಗೌರವ ದೊರೆಯಬೇಕು ಎಂಬ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

ಅಭಿಮಾನಿಗಳ ಕಣ್ಣೀರಿನ ವಿದಾಯ

ಎಸ್. ಜಾನಕಿ ಅವರ ನಿಧನದ ಸುದ್ದಿ ತಿಳಿಯುತ್ತಿದ್ದಂತೆಯೇ ಚಿತ್ರರಂಗದ ಗಣ್ಯರು, ಸಂಗೀತ ನಿರ್ದೇಶಕರು, ಗಾಯಕರು, ನಟರು ಹಾಗೂ ಲಕ್ಷಾಂತರ ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ ಸಂತಾಪ ಸೂಚಿಸಿದ್ದಾರೆ. "ಒಂದು ಯುಗದ ಅಂತ್ಯ", "ಸಂಗೀತ ಲೋಕದ ಅಪಾರ ನಷ್ಟ" ಎಂದು ಅನೇಕರು ಭಾವುಕರಾಗಿದ್ದಾರೆ.

ಸಂಗೀತ ಎಂದೆಂದಿಗೂ ಅಮರ

ದೇಹವಾಗಿ ಎಸ್. ಜಾನಕಿ ಅವರು ನಮ್ಮೊಂದಿಗೆ ಇಲ್ಲದಿದ್ದರೂ, ಅವರ ಸಾವಿರಾರು ಅಮರಗೀತೆಗಳು ಎಂದೆಂದಿಗೂ ಸಂಗೀತಾಸಕ್ತರ ಹೃದಯಗಳಲ್ಲಿ ಜೀವಂತವಾಗಿರಲಿವೆ. ಒಂದು ತಲೆಮಾರಿನ ನೆನಪು, ಭಾವನೆ ಮತ್ತು ಜೀವನದ ಭಾಗವಾಗಿದ್ದ ಅವರ ಕಂಠಸಿರಿ ಮುಂದಿನ ಪೀಳಿಗೆಗಳಿಗೂ ಸ್ಫೂರ್ತಿಯಾಗಲಿದೆ.

ಗಾನಕೋಗಿಲೆ ಎಸ್. ಜಾನಕಿ ಅವರಿಗೆ ಸ್ವರ್ಣ ಭಾರತ್ ಟೈಮ್ಸ್ ವತಿಯಿಂದ ಭಾವಪೂರ್ಣ ನಮನಗಳು.

Edited by : Santosh Kumar, Printed By Santosh Kumar, Published By Santosh Kumar, Owned By Santosh Kumar, Place of Publication No.3124, 2nd Floor Double Road, Near Esi Hospital, Hal 2nd Stage, Bengaluru, Karnataka-560 038. Printer: MD KRISHNA Printed at: Chamundi Printers & Publishers,No. 1580, 7th Main, R.p.c. Layout, Bengaluru, Karnataka - 560104. e-mail: swarnabharattimes@gmail.com Editor: Santosh Kumar, Cell:9845732329